ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



ದೇವರ ಸ್ಥಾನದಲ್ಲಿರುವ ವ್ಯಕ್ತಿಯನ್ನು ಮಾನವರಂತೆ ಕಾಣುವುದು ಸರಳವಲ್ಲ. ಆದರೆ ತೇಲ್ತುಂಬ್ಡೆ ಅಬ್ಬರವಿಲ್ಲದೇ, ಶೌರಿಯವರಂತೆ ಪ್ರಚೋದನಾಕಾರಿಯಾಗಿ ಬರೆಯದೇ ಅದನ್ನು ಸಾಧಿಸುತ್ತಾರೆ.

# ಮೂರ್ತೀಭೂತರಾದ ಮೂರ್ತಿಭಂಜಕ

ಬಾಬಾಸಾಹೇಬ್ ಡಾಕ್ಟರ್ ಅಂಬೇಡ್ಕರ್ ಈಚೆಗೆ ಹೆಚ್ಚಿನ ಸುದ್ದಿಯಲ್ಲಿದ್ದಾರೆ. ಆದರೆ ಆ ಸುದ್ದಿಗೆ ಕಾರಣ ಅವರ ವಿಚಾರಗಳಿಗಿಂತ ಹೆಚ್ಚಾಗಿ ಅವರ ಬಗ್ಗೆ ಜನರಿಗಿರಬೇಕಾದ ಗೌರವ, ಮತ್ತು ಯಾರೋ ಅವರಿಗೆ ಮಾಡಿದರೆನ್ನಲಾದ ಅಪಮಾನ ಎನ್ನುವ ಮಾತು. ಈ ಹಿನ್ನೆಲೆಯಲ್ಲಿ ಆನಂದ್ ತೇಲ್ತುಂಬ್ಡೆಯವರ 'ಐಕಾನೋಕ್ಲಾಸ್ಟ್' ಪುಸ್ತಕವನ್ನು ನಾವು ಗಮನಿಸಬೇಕಾಗಿದೆ. ಈ ಪುಸ್ತಕ ಅಂಬೇಡ್ಕರ್ ಜೀವನದ ಅಪರೂಪದ ಛಾಯಾಚಿತ್ರಗಳು ಮತ್ತು ದಸ್ತಾವೇಜುಗಳನ್ನು ಹೊಂದಿದೆ. ಇದು, ಆಪ್ತವಾಗಿ ಮತ್ತು ಪ್ರಾಮಾಣಿಕವಾಗಿ ಅವರ ಜೀವನವನ್ನು ಚಿತ್ರಿಸುವ ಪ್ರಯಾಸವೂ ಹೌದು. ಸಾಮಾನ್ಯವಾಗಿ ಅಂಬೇಡ್ಕರ್ ಅವರನ್ನು ಮಹಾಮಾನವನಾಗಿ ಚಿತ್ರಿಸುವುದನ್ನು ಕಂಡಿದ್ದೇವೆ. ತಮ್ಮ ಜೀವನಕಾಲದಲ್ಲಿ ದಕ್ಕಿದ ಗೌರವಾದರಗಳಿಗಿಂತ ಹೆಚ್ಚೇ ಪ್ರಾಮುಖ್ಯತೆ ಕಾಲಾನುಕ್ರಮದಲ್ಲಿ ಅಂಬೇಡ್ಕರ್‌ಗೆ ಸಲ್ಲುತ್ತಿದೆ. ಇದಕ್ಕೆ ಅಂಬೇಡ್ಕರ್ ಅನುಭವಿಸಿದ ಜೀವನ, ಅದರಿಂದ ಉಂಟಾದ ದರ್ಶನ, ಪ್ರಸ್ತುತಪಡಿಸಿದ ಪ್ರಖರ ವಿಚಾರಗಳೂ ಹಾಗೂ ಆ ವಿಚಾರಗಳ ಹಿಂದಿದ್ದ ಪಾಂಡಿತ್ಯಪೂರ್ಣ ಓದು, ತರ್ಕ ಮತ್ತು ವಿಶಾಲ ಕ್ಯಾನ್ವಾಸೂ ಕಾರಣವಿರಬಹುದು. ಹೀಗಾಗಿಯೇ ಅಂಬೇಡ್ಕರ್ ಅವರ ಜೀವನವನ್ನು ಸರಿಯಾಗಿ ಗ್ರಹಿಸುವುದು ಒಂದು ಪುಸ್ತಕವನ್ನೋದುವುದರಿಂದ ಸಾಧ್ಯವಾಗುವ ಮಾತಲ್ಲ. ಹೀಗಾಗಿಯೇ ತೇಲ್ತುಂಬ್ಡೆಯವರ ಪುಸ್ತಕ ಮತ್ತೊಂದು ಆಸಕ್ತಿಕರ ಆಕರ ಗ್ರಂಥವಾಗಿ ನಮ್ಮ ಕೈಸೇರಿದೆ.

ಅಂಬೇಡ್ಕರ್ ಅವರ ಜೀವನದ ಬಗ್ಗೆ ಬರೆಯುವಾಗ, ಈಗಾಗಲೇ ಬಂದಿರುವ ಪುಸ್ತಕಗಳಿಗಿಂತ ಭಿನ್ನವಾಗಿ ಬರೆಯುವುದು ಸಾಧ್ಯವೇ ಎನ್ನುವ ಸವಾಲು ಪ್ರತಿ ಲೇಖಕನಿಗೂ ಇರಬೇಕು. ಅವರ ಜೀವನಚರಿತ್ರೆಯ ಘಟನೆಗಳನ್ನು ಸಾಕಷ್ಟು ಬಾರಿ ದಾಖಲಿಸಲಾಗಿದೆ. ಸಂಶೋಧನೆ ಮತ್ತು ದಸ್ತಾವೇಜುಗಳನ್ನು ಪರೀಕ್ಷಿಸಿ, ಕೆಲವು ವಿವರಗಳನ್ನು ಇನ್ನಷ್ಟು ಗಟ್ಟಿಯಾಗಿ ಹೇಳಬಹುದು. ಉದಾಹರಣೆಗೆ, ಆಕಾಶ್ ರಾಥೋರ್, ಅಂಬೇಡ್ಕರ್ ಲಂಡನ್ ಸ್ಕೂಲ್‌ನಲ್ಲಿ ಇದ್ದ ದಿನಗಳ ಬಗ್ಗೆ ಅಲ್ಲಿನ ಪ್ರಾಥಮಿಕ ದಸ್ತಾವೇಜುಗಳ ಮೂಲಕ ಈಗಿರುವ ನಂಬಿಕೆಗಳನ್ನು ಪ್ರಶ್ನಿಸುವ ಆಯಾಮಗಳನ್ನು ಹೊರತರುತ್ತಾರೆ. ಈ ರೀತಿಯ ಸೂಕ್ಷ್ಮ ಬದಲಾವಣೆಗಳನ್ನು ಬಿಟ್ಟರೆ ಭಿನ್ನವಾಗಿ ಬೇರೇನು